International Journal of Kannada Research
www.kannadajournal.com

ISSN: 2454–5813
IJKR 2021; 7(3): 132-134
© 2021 IJKR
www.kannadajournal.com
Received: 22-05-2021
Accepted: 29-06-2021

**ಡಾ.ಜಯಮ್ಮ.ಬಿ**
ಹೆಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ, ಕರ್ನಾಟಕ, ಭಾರತ

**Corresponding Author:**
**ಡಾ.ಜಯಮ್ಮ.ಬಿ**
ಹೆಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ, ಕರ್ನಾಟಕ, ಭಾರತ

# ನಾಯಕರ ಆಳ್ವಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿರುವ ನಾಗತಿಯರು: ಒಂದು ವಿಶ್ಲೇಷಣೆ

**ಡಾ.ಜಯಮ್ಮ.ಬಿ**

**DOI:** https://doi.org/10.22271/24545813.2021.v7.i3b.944

ವಿಜಯನಗರ ಪೂರ್ವ ಮತ್ತು ವಿಜಯನಗರೋತ್ತರ ಕಾಲಾವಧಿಯ ರಾಜ್ಯಾಡಳಿತ ವ್ಯವಸ್ಥೆಯನ್ನು ತುಲನಾತ್ಮಕವಾಗಿ ಅವಲೋಕಿಸಿದರೆ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಬಹಳಷ್ಟು ಮಾರ್ಪಾಡುಗಳಾಗಿರುವುದು ಕಂಡುಬರುತ್ತದೆ. ಇದಕ್ಕೆ ಬಹುಮುಖ್ಯ ಕಾರಣವೆಂದರೆ, ವಿಜಯನಗರ ಅರಸರು ಜಾರಿಗೆ ತಂದ ನಾಯಂಕರ ಪದ್ದತಿ.ಈ ಪದ್ದತಿ ಜಾರಿಯ ಹಿನ್ನೆಲೆಯಲ್ಲಿ ವಿಜಯನಗರ ಪೂರ್ವಕಾಲಕ್ಕಿಂತಲೂ ಈ ಕಾಲದ ರಾಜ್ಯಾಡಳಿತವು ಮತ್ತಷ್ಟು ವಿಕೇಂದ್ರೀಕರಣಗೊಂಡಿದ್ದನ್ನು ನೋಡುತ್ತೇವೆ. ವಿಜಯನಗರ ಸಾಮ್ರಾಜ್ಯದಾದ್ಯಂತ ಅಲ್ಲಲ್ಲಿ ಏಳ್ಗೆಹೊಂದಿದ ಪಾಳೆಯಗಾರರು ತಮಗೆ ನಿಗಧಿಪಡಿಸಿದ ಅಥವಾ ತಮ್ಮ ತಮ್ಮ ಆಡಳಿತ ವ್ಯಾಪ್ತಿಯಲ್ಲಿ (ಪಾಳೆಯಪಟ್ಟು) ಆಡಳಿತ ನಡೆಸಲು ಪ್ರಾರಂಭಿಸಿದರು. ಈ ಪಾಳೆಯಗಾರರನ್ನು ಪ್ರಮುಖವಾಗಿ ಮೂರು ವರ್ಗ(ವೃಂದ)ಗಳಲ್ಲಿ ಗುರುತಿಸಬಹುದು. ಚಿತ್ರದುರ್ಗ, ಉಮ್ಮತ್ತೂರು ಹಾಗೂ ಇನ್ನಿತರ ಕೆಲವು ಪಾಳೆಯಗಾರರು ಮೊದಲ ಸ್ಥರದಲ್ಲಿದ್ದರೆ, ಹರಪನಹಳ್ಳಿ, ಮತ್ತೋಡು ಹಾಗೂ ಇನ್ನಿತರ ಪಾಳೆಯಗಾರರು ಎರಡನೇ ಸ್ಥರದಲ್ಲಿ ಮತ್ತು ಬೂದಿಹಾಳು ಮತ್ತಿತರ ಸಣ್ಣ–ಪುಟ್ಟ ಪಾಳೆಯಪಟ್ಟುಗಳನ್ನು ಮೂರನೇ ಸ್ಥರದಲ್ಲಿಗುರುತಿಸಬಹುದು. ಈ ರೀತಿಯ ವಿಂಗಡನೆಗೆ ಪಾಳೆಯಗಾರರ ಶೂರತ್ವವೇ ಪ್ರಧಾನವಾದ ಮಾನದಂಡವಾಗಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ವಿಜಯನಗರ ಆಳ್ವಿಕೆಯ ಪಥನಾ ನಂತರದಲ್ಲಿ ಈ ಆಳ್ವಿಕೆಯು ಮತ್ತಷ್ಟು ವಿಸ್ತಾರಗೊಂಡು ಈ ಪಾಳೆಯಗಾರರ ಅನೇಕ ಶಾಖೆಗಳು ಹುಟ್ಟಿಕೊಂಡು ಆಳ್ವಿಕೆ ನಡೆಸಿದ್ದನ್ನು ನೋಡುತ್ತೇವೆ. ಹೀಗೆ ಪಾಳೆಯಗಾರರ ರಾಜ್ಯಾಡಳಿತವು ವಿಸ್ತಾರಗೊಂಡಂತೆಲ್ಲಾ ನಾಗತಿ/ನಾಗತಿಯರ ಹೆಸರುಗಳು ನಿಧಾನವಾಗಿ ಅಲ್ಲಲ್ಲಿ ಶಾಸನಗಳಲ್ಲಿ, ಬಖೈರುಗಳಲ್ಲಿ, ಕೈಫಿಯತ್ತುಗಳಲ್ಲಿ ಕಾಣಿಸಿಕೊಳ್ಳಲು ಪ್ರಾರಂಭವಾಗುತ್ತದೆ. ವಿಶೇಷವಾಗಿ ಪಾಳೆಯಗಾರರ ಆಳ್ವಿಕೆಯ ಸಂದರ್ಭದಲ್ಲಿ ಉಲ್ಲೇಖಿಸಲ್ಪಟ್ಟಿರುವ ಈ ನಾಗತಿಯರುಯಾರು ? ಪಾಳೆಯಗಾರರ ಆಳ್ವಿಕೆಯಲ್ಲಿ ಅವರ ಪಾತ್ರವೇನು ಮತ್ತು ಸಮಕಾಲೀನ ಸಂಸ್ಕೃತಿಗೆ ನಾಗತಿಯರಕೊಡುಗೆ ಏನು ?ಎನ್ನುವ ಅಂಶಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲಾವಧಿಯನ್ನುಕುರಿತಾಗಿ ಈಗಾಗಲೇ ಸಂಶೋಧನೆ ನಡೆಸಿರುವ ಅನೇಕ ಸಂಶೋಧಕರು ಸಾಂದರ್ಭಿಕವಾಗಿ, ತಮ್ಮ ಸಂಶೋಧನೆಯ ಭಾಗವಾಗಿ ಅಥವಾ ತಮ್ಮ ಸಂಶೋಧನೆಗೆ ಅದಕ್ಕೆ ಪೂರಕವಾಗಿ ನಾಗತಿಯರನ್ನು ಕುರಿತು ಉಲ್ಲೇಖಿಸಿದ್ದಾರೆ. ಇಡೀದಕ್ಷಿಣ ಭಾರತದಾದ್ಯಂತ ಅಸ್ತಿತ್ವದಲ್ಲಿದ್ದ ಈ ಪಾಳೆಯಪಟ್ಟುಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಉಲ್ಲೇಖಗೊಂಡಿರುವ ಈ ನಾಗತಿಯರ ಐತಿಹಾಸಿಕ ಹಿನ್ನೆಲೆ, ಅವರ ಸಾಮಾಜೋ–ಧರ್ಮ, ಆಡಳಿತಾತ್ಮಕ ಮತ್ತು ಸಾಸ್ಕೃತಿಕ ಕೊಡುಗೆಗಳನ್ನು ಕುರಿತು ವಿಶ್ಲೇಷಣಾತ್ಮಕವಾದ, ವಿಸ್ತೃತವಾದ ಅಧ್ಯಯನ/ಸಂಶೋಧನೆಯ ಅವಶ್ಯಕತೆಯಿದೆ ಎನಿಸುತ್ತದೆ. ಈ ಹಿನ್ನೆಲೆಯಲ್ಲಿ, ಚಿತ್ರದುರ್ಗ ಪಾಳೆಯಗಾರರಿಗೆ ಸೀಮಿತವಾಗಿ, ಈ ಪಾಳೆಯಪಟ್ಟಿನಲ್ಲಿ ಉಲ್ಲೇಖಗೊಂಡಿರುವ ನಾಗತಿಯರನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

ಚಿತ್ರದುರ್ಗ ಪಾಳೆಯಗಾರರು ತಮ್ಮ ಆಳ್ವಿಕೆಯ ಕಾಲಾವಧಿಯಲ್ಲಿ ಅನೇಕ ಹೊಸ ನಗರ/ಹಳ್ಳಿ/ಊರುಗಳನ್ನು ನಿರ್ಮಿಸಿರುವುದು ಅಥವಾ ಜೀರ್ಣೋದ್ದಾರಗೊಳಿಸಿ ಮರುನಾಮಕರಣ

ಮಾಡಿರುವುದು ಅವರ ಶಾಸನಗಳಿಂದಲೇ ತಿಳಿದುಬರುತ್ತದೆ. ಹೀಗೆ ಹೊಸದಾಗಿ ನಿರ್ಮಿಸಿದ ಬಹುತೇಕ ಊರುಗಳಿಗೆ ನಾಗತಿಯರ ಹೆಸರುಗಳನ್ನಿಟ್ಟಿದ್ದಾರೆ.ಇದು ಗಮನಿಸಬೇಕಾದ ಅಂಶ. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ನಾಗತಿಯರುತಮ್ಮ ಪಟ್ಟದರಸಿ ಇಲ್ಲವೇ ಪತ್ನಿಯರಾಗಿರಬೇಕು ಎನಿಸುತ್ತದೆ. ಈ ರೀತಿಯಾಗಿ ಪಾಳೆಯಗಾರರ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಮತ್ತು ಪ್ರಸ್ತುತ ಕಂದಾಯ ಗ್ರಾಮಗಳಾಗಿರುವ ನಾಗತಿಯರ ಹೆಸರಿನ ಅನೇಕ ಗ್ರಾಮಗಳನ್ನು ಇಂದಿಗೂ ಈ ಭಾಗದಲ್ಲಿ ನೋಡುತ್ತೇವೆ. ಅವುಗಳಲ್ಲಿ ಮುಖ್ಯವಾಗಿ ವೀರವ್ವನಾಗತಿ ಹಳ್ಳಿ, ಕೆಂಚವ್ವ ನಾಗತಿಹಳ್ಳಿ, ಓಬವ್ವನಾಗತಿ ಹಳ್ಳಿ, ಕಲ್ಲವ್ವನಾಗಹಳ್ಳಿ, ಲಿಂಗವ್ವನಾಗತಿ ಹಳ್ಳಿ, ಚಿನ್ನಮ್ಮನಾಗತಿ ಹಳ್ಳಿ, ಲಿಂಗವ್ವನಾಗತಿ ಹಳ್ಳಿ ಇತ್ಯಾದಿ.

ಚಿತ್ರದುರ್ಗದ ಪಾಳೆಯಗಾರರ ಆಳ್ವಿಕೆಯ ಕಾಲದಲ್ಲಿ ಮಹಿಳೆಯರು ಅಮೋಘವಾದ ಪಾತ್ರವಹಿಸಿದ್ದಾರೆ. ಇಲ್ಲಿನ ಒನಕೆ ಓಬವ್ವೆ ದುರ್ಗದ ಇತಿಹಾಸದಲ್ಲಷ್ಟೇ ಅಲ್ಲದೇ, ಕರ್ನಾಟಕದ ಐತಿಹಾಸಿಕ ಮಹಿಳಾ ಅಧ್ಯಯನದಲ್ಲೇ ಮುಂಚೂಣಿಯಲ್ಲಿದ್ದಾಳೆ ಹಾಗೂ ಮನೆಮಾತಾಗಿದ್ದಾಳೆ. ಒನಕೆ ಓಬವ್ವೆಯ ಶೌರ್ಯ–ಸಾಹಸಗಾಥೆಯು ಇಂದಿಗೂ, ಅನೇಕ ಮಹಿಳೆಯರಿಗೆ ಸ್ಪೂರ್ತಿದಾಯಕ ವಿಷಯವಾಗಿದೆ. ಒನಕೆ ಓಬವ್ವೆಯಂತೆಯೇ ಇಲ್ಲಿನ ಪ್ರಸಿದ್ಧಳಾದ ಮತ್ತೊಬ್ಬ ಮಹಿಳೆಯೆಂದರೆ, ಯರದೇಬವ್ವೆ. ಓಬವ್ವೆಯು ಶತೃಗಳನ್ನು ತನ್ನ ಒನಕೆಯಿಂದ ಎದುರಿಸಿದ್ದರೆ, ಯರದೇಬವ್ವೆಯು ಮರದಿಂದಲೇ ಶತೃಗಳನ್ನು ಓಡಿಸಿದಳು ಎನ್ನುವ ಸಂದರ್ಭವನ್ನು ಊಹಿಸಿಕೊಂಡರೆ, ಅವಳ ಶೌರ್ಯ–ಕೆಚ್ಚದೆ ಇನ್ನೆಷ್ಟಿದ್ದಿರಬೇಕು ಎನಿಸುತ್ತದೆ. ಯರದೇಬವ್ವೆಯು ಇಂದಿಗೂ ಅನೇಕ ಮಹಿಳೆಯರ ಆರಾಧ್ಯದೈವಳಾಗಿ ಉಳಿದುಕೊಂಡಿದ್ದಾಳೆ.ಇದೇ ರೀತಿ ಅನೇಕ ನಾಗತಿಯರೂ ಸಹ ಆಧುನಿಕ ಮಹಿಳೆಯರ ಸ್ಪೂರ್ತಿಯಾಗಿರುವುದು ಸುಳ್ಳಲ್ಲ.

ಚಿತ್ರದುರ್ಗದ ಆರಂಭದ ನಾಯಕರಲ್ಲಿ ಪ್ರಸಿದ್ದನಾದ ಕಸ್ತೂರಿ ರಂಗಪ್ಪನಾಯಕನ ಮೂರನೇ ಮಗನಾದ ಇಮ್ಮಡಿ ಮದಕರಿನಾಯಕರ ಮಡದಿ ವೀರವ್ವನಾಗತಿಯ ಹೆಸರಿನ ಗ್ರಾಮಗಳು ಇಲ್ಲಿನ ಹೊಸದುರ್ಗ, ಹಿರಿಯೂರು ಮತ್ತು ಜಗಳೂರು ತಾಲ್ಲೂಕಿನಲ್ಲಿವೆ. ವೀರವ್ವನಾಗತಿಯ ಹೆಸರಿನಲ್ಲಿ ಗ್ರಾಮವನ್ನು ನಿರ್ಮಿಸಿ ಅಲ್ಲಿ ಒಂದು ಆಂಜನೇಯ ದೇವಾಲಯವನ್ನು ನಿರ್ಮಿಸಿದ ವಿಷಯ ಇಲ್ಲಿನ ಕ್ರಿ.ಶ.1681ರ ಶಾಸನದಿಂದ ತಿಳಿದುಬರುತ್ತದೆ. ಈತನ ಮಗಳಾದ ಕೆಂಚವ್ವ ನಾಗತಿಯ ಹೆಸರಿನಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಗ್ರಾಮಗಳಿವೆ.

ಇಮ್ಮಡಿ ಮದಕರಿ ನಾಯಕನ ಪತ್ನಿ ಓಬವ್ವನಾಗತಿ ಮತ್ತು ಹಿರೇಮದಕರಿ ನಾಯಕನ ಪತ್ನಿ ಓಬವ್ವ ನಾಗತಿಯರ ಹೆಸರಿನ ಅನೇಕ ಗ್ರಾಮಗಳು ಈ ಪರಿಸರದಲ್ಲಿರುವುದನ್ನು ನೋಡುತ್ತೇವೆ. ಇವರಿಬ್ಬರೂ ಬೇರೆ ಬೇರೆ ಕಾಲಘಟ್ಟಗಳಲ್ಲಿ ಕಂಡುಬಂದರೂ ಒಂದೇ ಹೆಸರಿರುವುದರಿಂದ ತುಸು ಗೊಂದಲಗಳಿವೆ. ಆದಾಗ್ಯೂ, ಇವರ ಸ್ಮರಣೆಯ ಗ್ರಾಮಗಳು ಇವರ ಸಾಹಸಗಾಥೆಗಳನ್ನು ಹೇಳುತ್ತವೆ. ಚಿತ್ರದುರ್ಗದ ಹಿರೇ ಮದಕರಿ ನಾಯಕನ ಪಟ್ಟದರಾಣಿ, ಕಸ್ತೂರಿರಂಗಪ್ಪ ನಾಯಕನ ತಾಯಿ ಓಬವ್ವ ನಾಗತಿ 2 ವರ್ಷಗಳವರೆಗೆ ಚಿತ್ರದುರ್ಗದ ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದಳು. ಚಿತ್ರದುರ್ಗದ ಇತಿಹಾಸದಲ್ಲಿ ಪಾಳೆಯಗಾರರಂತೆಯೇ 2 ವರ್ಷಗಳ ಕಾಲ ರಾಜ ಪ್ರತಿನಿಧಿಯಾಗಿ ದಕ್ಷತೆಯಿಂದ ರಾಜ್ಯವಾಳಿದಳು. ಕುದುರೆಯೇರಿ ಶತ್ರುಗಳ ವಿರುದ್ಧ ರಣರಂಗದಲ್ಲಿ ಹೋರಾಡಿ ಶತ್ರುಗಳ ತಲೆಗಳನ್ನು ಚೆಂಡಾಡಿದ ಏಕೈಕ ವೀರಮಹಿಳೆ, ರಾಜಮಾತೆ ಗಂಡೋಬಳವ್ವನಾಗತಿ, ಹಿರಿಯೂರಿನಲ್ಲಿ ಅನ್ನಛತ್ರ ಸ್ಥಾಪಿಸುವುದಕ್ಕಾಗಿ ಗೌಡನಹಳ್ಳಿ ಮಠಕ್ಕೆದತ್ತಿ ನೀಡಿಅದರಲ್ಲಿ ಗಂಡೋಬಳವ್ವವರನ್ನು "ಮಾತೋಶ್ರೀ" ಎಂದು ಹೊರಕೆರೆದೇವರಪುರದ ಶಾಸನದಲ್ಲಿ 'ತಾಯಿ'ಎಂದು ಶಿಲಾ ಶಾಸನ ಹಾಕಿಸಿ ತನ್ನ ಮಾತೃ ಋಣವನ್ನು ಸಲ್ಲಿಸುತ್ತೇನೆಂದು ಹಾಗೆಯೇ ಮಾಡಿದರು.

ಇಮ್ಮಡಿ ಮದಕರಿನಾಯಕರ ಮಡದಿಯರಾದ ಬೊಮ್ಮವ್ವನಾಗತಿ ಮತ್ತು ಕಲ್ಲವ್ವನಾಗತಿಯರ ಹೆಸರಿನ ಗ್ರಾಮಗಳು ಇಲ್ಲಿರುವುದನ್ನು ಗಮನಿಸಿದರೆ, ನಾಗತಿಯರು ಪಾಳೆಯಗಾರರ ಪಟ್ಟದರಸಿಯಾಗಿಲೇಬೇಕು ಎಂದೇನಿರಲಿಕ್ಕಿಲ್ಲ ಎನ್ನುವ ನಿರ್ಧಾರಕ್ಕೆ ಬರಬಹುದು. ಚಿಕ್ಕಣ್ಣನಾಯಕನ ಪತ್ನಿಯಾದ ಹನುಮವ್ವನಾಗತಿಯ ಹೆಸರಿನ ಗ್ರಾಮಕ್ಕೆ ತನ್ನದೇ ಆದ ಮಹತ್ವ ಇರುವುದನ್ನು ಇಲ್ಲಿನ ಗ್ರಾಮಸ್ಥರು ಹೇಳುತ್ತಾರೆ. ತರೀಕೆರೆ ಪಾಳೆಯಗಾರರ ವಂಶಸ್ಥಳಾದ ಹನುಮವ್ವಳ ವಿವಾಹದ ಹಿನ್ನೆಲೆಯನ್ನು ಇಲ್ಲಿನ ಗ್ರಾಮಸ್ಥರು ವೈಭವೀಕರಿಸಿ ಹೇಳುತ್ತಾರೆ. ಆದರೂ, ಹನುಮವ್ವನಾಗತಿಯ ಹೆಸರಿನಲ್ಲಿ ಚಿಕ್ಕಣ್ಣನಾಯಕರು ನಿರ್ಮಿಸಿದ ಗ್ರಾಮವು ಅಂದಿನ ಘಟನೆಗೆ ಸಾಕ್ಷಿಯೆಂಬಂತಿರುವುದು ಸುಳ್ಳಲ್ಲ. ಹೀಗೆ ಚಿತ್ರದುರ್ಗವನ್ನಾಳಿದ ಅನೇಕ ನಾಯಕರು ತಮ್ಮ ಪಟ್ಟದರಸಿ ಅಥವಾ ಮಡದಿಯ ಹೆಸರಿನಲ್ಲಿ ಗ್ರಾಮಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಹೀಗೆ ತಮ್ಮ ಮಡದಿಯರ ಹೆಸರಿನಲ್ಲಿ ಹೊಸ ಗ್ರಾಮಗಳನ್ನು ನಿರ್ಮಿಸಿರುವುದರ ಹಿಂದೆಅವರ ಪಾತ್ರ/ಕೊಡುಗೆ ಇರುವುದನ್ನು ಅಲ್ಲಗಳೆಯುವಂತಿಲ್ಲ.

ಓಬಣ್ಣ ನಾಯಕನ ಸೊಸೆ ತನ್ನಗಂಡ ನರಸಿಂಹನು ಮರಣ ಹೊಂದಿದ್ದಕ್ಕಾಗಿ ಅವನ ಹೆಸರಿನಲ್ಲಿ 'ನರಸಾಪುರ' ಎನ್ನುವ ಹೆಸರಿನಗ್ರಾಮವನ್ನು ನಿರ್ಮಿಸಿ ಅವನ ನೆನಪಿಗಾಗಿ ಆಂಜನೇಯನ ಗುಡಿಯನ್ನು ನಿರ್ಮಿಸಿದಳು.ಚಿಕ್ಕಕೋನಮ್ಮಗಂಡನಿಗಾಗಿ ಶಿಲಾಶಾಸನವನ್ನು ಬರೆಸಿದಳು ಚಿತ್ರದುರ್ಗದ ಪಾಳೆಯಗಾರರ ಇತಿಹಾಸದಲ್ಲಿ ಶಿಲಾ ಶಾಸನ ಹಾಕಿಸಿದ ನಾಗತಿಯರಲ್ಲಿ ಚಿಕ್ಕಕೋನಮ್ಮ ನಾಗತಿ ಪ್ರಥಮ ಮಹಿಳೆ ಎಂದು ಹೇಳಲಾಗುತ್ತಿದೆ.

ಚಿತ್ರದುರ್ಗದ ಪಾಳೆಯಗಾರರಲ್ಲೇ ಅತ್ಯಂತ ಪ್ರಮುಖನೂ, ಶ್ರೇಷ್ಠನೂ ಆದ ನಾಯಕನೆಂದರೆ ಭರಮಣ್ಣನಾಯಕ. ಈತನ ಮಡದಿಯರಾದ ದೊಡ್ಡಸಿದ್ದವ್ವ ಮತ್ತು ಚಿಕ್ಕಸಿದ್ದವ್ವರ ಹೆಸರಿನಲ್ಲಿ ನಿರ್ಮಿಸಿದ ಗ್ರಾಮಗಳಾದ ದೊಡ್ಡಸಿದ್ದವ್ವನಹಳ್ಳಿ ಮತ್ತು ಚಿಕ್ಕಸಿದ್ದವ್ವನಹಳ್ಳಿ ಹೆಸರಿನ ಗ್ರಾಮಗಳು ಇಂದಿಗೂ ಇಲ್ಲಿವೆ. ಇವುಗಳು ಅಂದಿನ ಸಾಮಾಜಿಕ ಇತಿಹಾಸವನ್ನು ತಿಳಿಯುವಲ್ಲಿ ಸಹಕಾರಿಯಾಗಿವೆ. ಚಿತ್ರದುರ್ಗದ ನಾಯಕರಲ್ಲಿ ಪ್ರಸಿದ್ದ ಹಾಗೂ ಕೊನೆಯ ನಾಯಕನಾದ ಐದನೇ ಮದಕರಿನಾಯಕನು ತನ್ನ ಪತ್ನಿಯಾದ ಬಂಗಾರಕ್ಕನಾಗತಿಯ ಹೆಸರಿನಲ್ಲಿ ಹಳ್ಳಿಯೊಂದನ್ನು ನಿರ್ಮಿಸಿ ಅದಕ್ಕೆ ಬಂಗಾರಕ್ಕನಹಳ್ಳಿ ಎನ್ನುವ ಹೆಸರಿಟ್ಟಿರುವನು. ಬಂಗಾರಕ್ಕ ನಾಗತಿಯು ತನ್ನ ಪಾಳೆಯಪಟ್ಟನ್ನು ಉಳಿಸಿಕೊಳ್ಳಲು ಮಾಡಿದ ಸಾಹಸವನ್ನು ಇಲ್ಲಿನ ಜನರು ಈಗಲೂ ಸ್ಮರಿಸಿಕೊಳ್ಳುತ್ತಾರೆ.

ಹೀಗೆ, ಚಿತ್ರದುರ್ಗದ ನಾಯಕರ ಆಳ್ವಿಕೆಯ ಕಾಲದಲ್ಲಿ ಕಂಡುಬರುವ ನಾಗತಿಯರು ಸಮಕಾಲೀನ ಪಾಳೆಯಗಾರರ ಪಟ್ಟದರಾಣಿ ಅಥವಾ ಅವರ ಮಡದಿಯರಾಗಿದ್ದು, ಪಾಳೆಯಪಟ್ಟಿನ ನಿರ್ವಹಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಷ್ಟೇ ಅಲ್ಲದೇ, ಅನೇಕ ಸಮಾಜಮುಖಿ ಕೆಲಸಗಳನ್ನು ನಿರ್ವಹಿಸಿರುವುದು ಕಂಡುಬರುತ್ತದೆ. ಕೆಲವು ನಾಗತಿಯರು ಪುರುಷರಂತೆಯೇ ವೇಷಭೂಷಣವನ್ನು ಧರಿಸಿ ರಣಾಂಗಣದಲ್ಲಿ ಪುರುಷನಂತೆಯೇ ವೀರಾವೇಷದಿಂದ ಯುದ್ಧ ಮಾಡಿದ ಉದಾಹರಣೆಗಳೂ ಇವೆ. ಇನ್ನೂ ಕೆಲವು ನಾಗತಿರು ಕೆರೆ–ಕಟ್ಟೆಗಳನ್ನು ನಿರ್ಮಿಸಿ ಈ ಭಾಗದ ಕೃಷಿಗೆ ಪ್ರೋತ್ಸಾಹಿಸಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗದ ಪಾಳೆಯಗಾರರ ಆಳ್ವಿಕೆ ಕಾಲದಲ್ಲಿ ಆಡಳಿತಾತ್ಮಕವಾಗಿ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ನೀಡಿದ ನಾಗತಿಯರನ್ನು ಸ್ಮರಿಸಿಕೊಳ್ಳಬೇಕಿದೆ.

**ಆಕರಗ್ರಂಥಗಳು**


1. ಅಮರೇಶ ಯತಗಲ್, 2005, ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು; ಚಾರಿತ್ರಿಕ ಅಧ್ಯಯನ,ಪಿಎಚ್.ಡಿ ಮಹಾ ಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ,ಹಂಪಿ.
2. ಗಿರಿಜಾ. ಟಿ, 2014, ಚಿತ್ರದುರ್ಗ–ನಾಗತಿ ಗಂಡೋಬಳವ್ವ, ಗಿರಿಶೈಲ ಪ್ರಕಾಶನ, ದಾವಣಗೆರೆ.
3. ದುರುಗಪ್ಪ ಎಂ. ಕೆ. 2010, ವಿಜಯನಗರೋತ್ತರ ಕಾಲೀನ ಬೇಡ ಜನಾಂಗ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ,
4. ಪುಟ್ಟಣ್ಣ ಎಂ.ಎಸ್, 1924, ಚಿತ್ರದುರ್ಗದ ಪಾಳೆಯಗಾರರು, ಬೆಂಗಳೂರು.
5. ಯೋಗೀಶ್ವರಪ್ಪ. ಡಿ.ಎನ್. 2001, ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು,ಧಾತ್ರಿ ಪುಸ್ತಕಮಾಲೆ. ಬೆಂಗಳೂರು.
6. ರಾಜಶೇಖರಪ್ಪ.ಬಿ. 2016, ಪ್ರಾಚೀನ ಚಿತ್ರದುರ್ಗ, ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ, ಚಿತ್ರದುರ್ಗ.
7. ಪ್ರೊ.ಲಕ್ಷ್ಮಣ್‌ತೆಲಗಾವಿ, 1987, ಹರತಿಸಿರಿ,ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.
8. ವಿರುಪಾಕ್ಷಿ ಪೂಜಾರಳ್ಳಿ. 2008, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಶ್ಯಾಮಲ ಸಿ.ಆರ್, 2008, ಪೂರ್ವಕರ್ನಾಟಕದ ಪಾಳೆಯಗಾರರು – ಒಂದುಅಧ್ಯಯನ,ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
10. ಸದಾಶಿವಪ್ಪ,ಕುಂ. ಬಾ. 2006, ಹರಪನಹಳ್ಳಿ ಪಾಳೆಯಗಾರರ ಇತಿಹಾಸ ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
11. ಸುರೇಶ.ಬಿ. 2009. ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಸಂಶೋಧನಾ ಪ್ರಕಾಶನ, ಚಿತ್ರದುರ್ಗ